Azadi Ka Amrit Mahotsav

ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ
ರಾಷ್ಟ್ರೀಯ ಸೇವಾ ಯೋಜನೆ

G20 भारत 2023 INDIA
वसुधैव कुटुम्बकम्
ONE EARTH • ONE FAMILY • ONE FUTURE

ಸಂಖ್ಯೆ: ಡಿಟಿಇ/ಎನ್‌ಎಸ್‌ಎಸ್/02/ಚಟುವಟಿಕೆ/2022-23

ಆಯುಕ್ತರವರ ಕಛೇರಿ,
ಅರಮನೆ ರಸ್ತೆ, ಬೆಂಗಳೂರು-01
ದಿನಾಂಕ:25.10.2023

## ಸುತ್ತೋಲೆ

**ವಿಷಯ:** 2023-24 ನೇ ಸಾಲಿನ ರಾ.ಸೇ.ಯೋ ಅಧಿಕಾರಿ /ಸ್ವಯಂ ಸೇವಕರಿಂದ ಮಾಡಲಾದ ಸಮಾಜಮುಖಿ ಯೋಜನೆ (Project) ಗಳಿಗೆ ನೀಡಲಾಗುವ ಉತ್ತಮ ಸಮಾಜಮುಖಿ ಯೋಜನೆ ಪ್ರಶಸ್ತಿಗೆ ಪ್ರಸ್ತಾವನೆಗಳನ್ನು ಸಲ್ಲಿಸುವ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಾಂತ್ರಿಕ ಶಿಕ್ಷಣ ಇಲಾಖೆಯ ಅಡಿಯಲ್ಲಿ ಬರುವ ತಾಂತ್ರಿಕ ಪಠ್ಯಗಳ (Course) ಅಧ್ಯಾಲಯವನ್ನು ಮುಂದುವರೆಸಿ ಅದರಿಂದ ಆವಿಷ್ಕಾರಕ ಅಂಶಗಳನ್ನು ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳಿಂದ ಹೊರತರುವ ದೃಷ್ಠಿಯಿಂದ "ಉತ್ತಮ ಸಮಾಜಮುಖಿ ಯೋಜನೆ" (ಒಟ್ಟು ಮೂರು) ಪ್ರಶಸ್ತಿಗಳನ್ನು 2018-19 ನೇ ಸಾಲಿನಿಂದ ನೀಡಲಾಗುತ್ತಿದ್ದು. ಇದರಿಂದ ತಾಂತ್ರಿಕ ವಿಚಾರಗಳನ್ನು ಸಮಾಜಿಕ ಹಾಗೂ ಮಾನವಿಯ ಉಪಯೋಗಗಳಿಗೆ/ಅವಶ್ಯಕತೆಗಳಿಗೆ ಅನುಗುಣವಾಗಿ ವಿದ್ಯಾರ್ಥಿಗಳ ತಾಂತ್ರಿಕ ಜ್ಞಾನವನ್ನು ಬಳಸಲು ಹಾಗೂ ವಿದ್ಯಾರ್ಥಿಗಳ ಚಿಂತನೆಗಳನ್ನು ಸಮಾಜಮುಖಿ/ರಾಷ್ಟ್ರಮುಖಿ ಮಾಡುವುದು ಇಲಾಖೆಯ ರಾ.ಸೇ.ಯೋ ಕೋಶದ ಉದ್ದೇಶವಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ರಾ.ಸೇ.ಯೋ ಘಟಕಗಳಿಂದ ವಿವಿಧ ತಾಂತ್ರಿಕ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ಸಾಮಾಜಿಕ ಅಧ್ಯತೆಯುಳ್ಳ ಯೋಜನೆ (Project) ಗಳನ್ನು ಹಾಗೂ ಅದಕ್ಕೆ ಸಂಬಂಧಿಸಿದ ವಸ್ತು ನಿಷ್ಠೆಯುಳ್ಳ ಪ್ರಾತ್ಯಕ್ಷಿಕೆ ( CD/DVD/ ಯಾವುದೇ ವಿದ್ಯನ್ಮಾನ ಸ್ವರೂಪ) ಅನ್ನು ಈ ಸುತ್ತೋಲೆಯಲ್ಲಿ ತಿಳಿಸಿದ ಅಂಶಗಳನ್ನೊಳಗೊಂಡ 10 ಪುಟಗಳಿಗೆ ಸೀಮಿತಗೊಳಿಸಿ ಪುಸ್ತಕ ರೂಪದ ವರದಿಯನ್ನು ಇಲಾಖೆಯ ರಾ.ಸೇ.ಯೋ ಕಛೇರಿಗೆ ದಿನಾಂಕ :24.11.2023 ರ ಒಳಗಾಗಿ ಸಲ್ಲಿಸಲು ಸೂಚಿಸಲಾಗಿದೆ.

ವರದಿಯ ಅಂಶಗಳು:

1. ರಾಸೇಯೋ ಘಟಕ ಅಸ್ತಿತ್ವಕ್ಕೆ ಬಂದು ಈವರೆಗೂ ಸಕ್ರೀಯವಾಗಿರುವ ಕುರಿತು ಪ್ರಾಚಾರ್ಯರ ದೃಡೀಕರಣ ಪತ್ರ
2. ಕಾರ್ಯಕ್ರಮಾಧಿಕಾರಿಯವರ ಮತ್ತು ಸ್ವಯಂ ಸೇವಕರ/ವಿದ್ಯಾರ್ಥಿಗಳ ವಿವರ
3. ಯೋಜನೆ (Project) ಯ ಮುಖ್ಯ ಉದ್ದೇಶ
4. ವಿಧಾನ (Methodology)
5. ಯೋಜನೆ ಫಲಿತಾಂಶ ( Outcomes)

ನಿರ್ದೇಶಕರು

ಇವರಿಗೆ,
ತಾಂತ್ರಿಕ ಶಿಕ್ಷಣ ಇಲಾಖೆಗೆ ಒಳಪಡುವ ರಾಜ್ಯದ ಎಲ್ಲಾ ಪಾಲಿಟೆಕ್ನಿಕ್ ಗಳ ಪ್ರಾಚಾರ್ಯರಿಗೆ ಸೂಕ್ತ ಕ್ರಮಕ್ಕಾಗಿ

ಪ್ರತಿ:-
1. ಇ-ಆಡಳಿತ ಇಲಾಖಾ ಅಂತರ್ಜಾಲತಾಣದಲ್ಲಿ ಪ್ರಕಟಿಸಲು
2. ಕಛೇರಿ ಪ್ರತಿ